ಸಿ. ಸಿ. ನಂ.- **876/22**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **12-11-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ಶ್ರೀ ಬಿ ಎಸ್ ವಕೀಲರಿಂದ -

ಈ ಪ್ರಕರಣದಲ್ಲಿ ಬ್ಯಾಂಕಿನ ಪರ ಹಾಜರಾಗಲು ಪ್ರತ್ಯೇಕವಾಗಿ ನನಗೆ ಅಧಿಕಾರ ಪತ್ರವನ್ನು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು, ಎಲ್ಲಾ ಪ್ರಕರಣಗಳಲ್ಲಿ ಬ್ಯಾಂಕ್ ನ್ನು ಪ್ರತಿನಿಧಿಸಲು ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ದಿಃ **11.07.2022** ರಂದು ಬ್ಯಾಂಕಿಗೆ ಬಂದು ಚೆಕ್ ಕೊಟ್ಟಿರುತ್ತಾರೆ. ಸದರಿ ನಿಪಿ-1 ಚೆಕ್ **2022** ನೇ ಇಸವಿಯ ಸಿ ಟಿ ಎಸ್ ಚೆಕ್ ಆಗಿರುತ್ತದೆ. ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಬ್ಯಾಂಕಿನಲ್ಲಿ ಈ ಹಿಂದೆ ಸಹ ಲೇವಾದೇವಿ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಅವರು ಈ ಹಿಂದೆ ಸಾಲ ಪಡೆದು ಅದರ ಮರುಪಾವತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆರೋಪಿ **2016** ನೇ ಇಸವಿಯಲ್ಲಿ ಮನೆ ಅಡಮಾನದ ಆಧಾರದ ಮೇಲೆ ಪಡೆದ ಸಾಲದ ಮರುಪಾವತಿಯ **11** ರಸೀದಿಗಳನ್ನು ಎದುರು ತೋರಿಸಿ, ಸದರಿ ರಸೀದಿಗಳು ಸಾಕ್ಷಿ ಪ್ರತಿನಿಧಿಸಿರುತ್ತಿರುವ ಬ್ಯಾಂಕ್ ಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಅದನ್ನು ಒಪ್ಪಿರುತ್ತಾರೆ, ಹೀಗಾಗಿ ಸದರಿ **11** ರಸೀದಿಗಳನ್ನು ಒಟ್ಟಿಗೆ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಮ್ಮೆ ಆರೋಪಿ **2015** ನೇ ಇಸವಿಯಲ್ಲಿ ಮನೆ ಅಡಮಾನದ ಆಧಾರದ ಮೇಲೆ ಪಡೆದ ಸಾಲದ ಮರುಪಾವತಿಯ **12** ರಸೀದಿಗಳನ್ನು ಎದುರು ತೋರಿಸಿ, ಸದರಿ ರಸೀದಿಗಳು ಸಾಕ್ಷಿ ಪ್ರತಿನಿಧಿಸಿರುತ್ತಿರುವ ಬ್ಯಾಂಕ್ ಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಅದನ್ನು ಒಪ್ಪಿರುತ್ತಾರೆ, ಹೀಗಾಗಿ ಸದರಿ **12** ರಸೀದಿಗಳನ್ನು ಒಟ್ಟಿಗೆ ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಮ್ಮೆ ಆರೋಪಿ **2017** ನೇ ಇಸವಿಯಲ್ಲಿ ಪಡೆದ ಶ್ಯೂರಿಟಿ ಆಧಾರದ ಸಾಲದ ಮರುಪಾವತಿಯ **4** ರಸೀದಿಗಳನ್ನು ಎದುರು ತೋರಿಸಿ, ಸದರಿ ರಸೀದಿಗಳು ಸಾಕ್ಷಿ ಪ್ರತಿನಿಧಿಸಿರುತ್ತಿರುವ ಬ್ಯಾಂಕ್ ಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಅದನ್ನು ಒಪ್ಪಿರುತ್ತಾರೆ, ಹೀಗಾಗಿ ಸದರಿ **4** ರಸೀದಿಗಳನ್ನು ಒಟ್ಟಿಗೆ ನಿಡಿ-3 ಎಂದು ಗುರುತಿಸಲಾಯಿತು. ಆರೋಪಿ ಯಾವಾಗ ಅಡಮಾನ ಆಧಾರಿತ ಸಾಲ ಹಾಗೂ

ಶ್ಯೂರಿಟಿ ಸಾಲ ಪಡೆದಿದ್ದರು ಎಂಬ ಬಗ್ಗೆ ನಾನು ನೋಟೀಸ್ ನಲ್ಲಿ ಬರೆಸಿಲ್ಲ ಏಕೆಂದರೆ ಸದರಿ ಸಾಲಗಳ ಮರುಪಾವತಿಯನ್ನು ಆರೋಪಿ ಈಗಾಗಲೇ ಮಾಡಿರುತ್ತಾರೆ. ಸಾಕ್ಷಿಗೆ 2015 ನೇ ಇಸವಿಯಲ್ಲಿ ಆರೋಪಿ ಪಡೆದ ಅಡಮಾನ ಆಧಾರಿತ ಸಾಲದ ಪಾಸ್ ಪುಸ್ತಕ ವನ್ನು ಎದುರು ತೋರಿಸಿದಾಗ ಅದನ್ನು ಒಪ್ಪಿರುತ್ತಾರೆ, ಆದ್ದರಿಂದ ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು. 2020 ನೇ ಇಸವಿಯಲ್ಲಿ ಆರೋಪಿ ಶ್ಯೂರಿಟಿ ಆಧಾರದ ಮೇಲೆ ಸಾಲ ಪಡೆದಿರುತ್ತಾರೆ. ನಿಡಿ-3 ಶ್ಯೂರಿಟಿ ಸಾಲದ ರಸೀದಿಗಳು 2017 ನೇ ಇಸವಿಗೆ ಸಂಬಂಧಪಟ್ಟಿದ್ದಾಗಿರುತ್ತದೆ ಹೀಗಿರುವಾಗ 2020 ನೇ ಇಸವಿಯಲ್ಲಿ ಆರೋಪಿ ಶ್ಯೂರಿಟಿ ಸಾಲ ಪಡೆದಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅದೇರಡೂ ಬೇರೆ ಬೇರೆ ಸಾಲಗಳು ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಸಾಲದ ಖಾತಾ ವಿವರವನ್ನು ಹಾಜರುಪಡಿಸಿರುತ್ತೇನೆ ಆದರೆ ಸಾಲದ ಅರ್ಜಿ ಹಾಜರುಪಡಿಸಿಲ್ಲ. ಆರೋಪಿ ನಮ್ಮ ಬ್ಯಾಂಕ್ ನಲ್ಲಿ ಶ್ಯೂರಿಟಿ ಸಾಲವನ್ನು 2020 ನೇ ಇಸವಿಯಲ್ಲಿ ಪಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಅನುಕೂಲಕ್ಕೆ ತಕ್ಕಂತೆ ಈ ದೂರನ್ನು ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಪಡೆದ ಎಲ್ಲಾ ಸಾಲದ ಮರುಪಾವತಿ ಮಾಡಿದ್ದರುೂ ಸಹ, ಬಡ್ಡಿ ಮೊತ್ತದ ತಿರುವಳಿಗಾಗಿ ನೀಡಿದ ಬ್ಲಾಂಕ್ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-8 ಖಾತಾ ವಿವರದಲ್ಲಿ ಆರೋಪಿ ಮರುಪಾವತಿ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಒಂದು ಬಾರಿ ಮಾತ್ರ ಪಾವತಿ ಮಾಡಿರುತ್ತಾರೆ ಅಂದರೆ ದಿಃ 12.03.2020 ರಂದು ರೂ.20,360-00 ಮೊತ್ತವನ್ನು ಆರೋಪಿ ಪಾವತಿ ಮಾಡಿದ ಬಗ್ಗೆ ನಮೂದು ಇದೆ, ಮುಂದುವರೆದು ಸದರಿ ಆರೋಪಿ ಇದನ್ನು ಹೊರತುಪಡಿಸಿ ಬೇರೆ ಯಾವುದೇ ಪಾವತಿ ಮಾಡದೇ ಇರುವುದರಿಂದ ಅದರ ಬಗ್ಗೆ ನಮೂದು ಇಲ್ಲ ಎಂದು ನುಡಿಯುತ್ತಾರೆ. ಸದರಿ ಖಾತಾ ವಿವರ ಜುಲೈ 2022 ನೇ ಇಸವಿವರೆಗೆ ಮಾತ್ರ ಇರುತ್ತದೆ ಎಂದರೆ ಸಾಕ್ಷಿ ಸದರಿ ಪ್ರಕರಣವನ್ನು ದಾಖಲಿಸುವವರೆಗೆ ಈ ಖಾತಾ ವಿವರವನ್ನು ಹಾಜರುಪಡಿಸಲಾಗಿದೆ ಎಂದು ನುಡಿಯುತ್ತಾರೆ. ನಮ್ಮ ಬ್ಯಾಂಕ್ ಗೆ ಯಾವುದೇ ಸಾಲದ ಮರುಪಾವತಿ ಮಾಡುವ ಭಾಧ್ಯಸ್ಥಿಕೆ ಆರೋಪಿಗೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.